ಬೈಲಹೊಂಗಲ ತಹಶೀಲ್ದಾರ್ ಆಫೀಸ್ ಕಟ್ಟಡ ನಿರ್ಮಾಣ

640 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಹಶೀಲ್ದಾರ್ ಕಟ್ಟಡ ಕಟ್ಟಿಸುವ ಸಲುವಾಗಿ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗುವುದೆಂದು ನೀಡಿದ ಆಶ್ವಾಸನೆ ನಿಜವೆ?

ಆ) ಹಾಗಿದ್ದಲ್ಲಿ, ವಿಧಾನ ಸಭೆಯಲ್ಲಿ ನೀಡಿದ ಆಶ್ವಾಸನೆ ಪ್ರಕಾರ, ಈ ಕಟ್ಟಡಕ್ಕೆ 10.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗಿದೆ ಮತ್ತು ಇದುವರೆಗೂ ಬಿಡುಗಡೆ ಮಾಡದೆ ಇದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು) :

ಅ) ನಿಜ.

ಆ) 1992ರಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡಲು ರೂ. 39.31 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಅದರಂತೆ ಮಿನಿ ವಿಧಾನ ಸೌಧ ನಿರ್ಮಾಣದ ಸಲುವಾಗಿ 1992-93ರ ಸಾಲಿನಲ್ಲಿ ರೂ. 13.00 ಲಕ್ಷ ಮತ್ತು 93-94ರ ಸಾಲಿನಲ್ಲಿ 1.66 ಲಕ್ಷ ಒದಗಿಸಲಾಗಿದೆ.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆ

638 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದೇ ಇರುವುದರಿಂದ ತೊಂದರೆಗೆ ಈಡಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಆ ಕಾರ್ಖಾನೆಗಳಿಗೆ ರಾಜ್ಯದ ಬೇರೆ ಕಡೆಯಿಂದ ಕಬ್ಬನ್ನು ಪೂರೈಸಲು ಯಾವ ಕ್ರಮ ಕೈಗೊಂಡಿರುವರು?

ಇ) ಕಳೆದ ವರ್ಷ ಫೆಬ್ರವರಿ ಅಂತ್ಯದವರೆಗೆ ರಾಜ್ಯದಲ್ಲಿ ಇರುವ ಪ್ರತಿಯೊಂದೂ ಸಕ್ಕರೆ ಕಾರ್ಖಾನೆಯವರು ಎಷ್ಟು ಕಬ್ಬನ್ನು ನುರಿಸುವುರು? (ಪ್ರತಿಯೊಂದು ಕಾರ್ಖಾನೆಯ ಸಂಪೂರ್ಣವಾದ ವಿವರವನ್ನು ಕೊಡುವುದಾಗಬೇಕು)

ಈ) ಈ ವರ್ಷ ಪ್ರತಿಯೊಂದು ಫ್ಯಾಕ್ಟರಿಯವರು ಫೆಬ್ರವರಿ ಅಂತ್ಯದವರೆಗೆ ಎಷ್ಟು ಕಬ್ಬನ್ನು ನುರಿಸಿರುವರು?

ಉ) ರಾಜ್ಯದಲ್ಲಿರುವ ಕಬ್ಬನ್ನು ಹೊರರಾಜ್ಯಕ್ಕೆ ಕಳುಹಿಸಿರುವುದರಿಂದ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ನಡೆಸಲು ತೊಂದರೆಯಾಗುತ್ತಿರುವ ಸಂಗತಿ ನಿಜವೇ ಮತ್ತು ಹೊರರಾಜ್ಯಗಳಿಗೆ ಕಬ್ಬನ್ನು ಕಳುಹಿಸಿರುವುದರಿಂದ ರಾಜ್ಯಕ್ಕೆ ಎಷ್ಟು ಆರ್ಥಿಕ ನಷ್ಟವಾಗಿರುವುದು?

ಡಾ ಹೆಗ್ಗಪ್ಪ ಲಮಾಣಿ (ಸಕ್ಕರೆ ಸಚಿವರು) :

ಅ) ಬಂದಿದೆ

ಆ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳನ್ನು ಬಿಟ್ಟರೆ ಉಳಿದೆಲ್ಲಾ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬಿನ ಕೊರತೆಯನ್ನು